ಶ್ರೀ ಬಿ. ರಾಚಯ್ಯ.—ನನಗೆ ಬಂದಂತಹ ಆರ್ಜಿ ಜಮೀನಿನ ವ್ಯಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಅದರಿಂದ ಉತ್ತರ ತರಿಸಿಕೊಂಡು ಅದು ಯಾರಿಗೆ ಸೇರಬೇಕಾಗಿದೆ ಅವರಿಗೆ ರಕ್ಷಣೆ ಕೊಡಬೇಕೆಂದು ತಿಳಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ರಕ್ಷಣೆ ವಿಷಯ ಆಲ್ಲ. ಅದು ಏನೇ ಇರಲಿ. ನಾನು ಕೇಳುವುದು ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಕೋರ್ಟಿನಲ್ಲಿ ಸುಳ್ಳು ರಿಪೋರ್ಟನ್ನು ಮಾಡಿದ್ದಾನೆಂದ ಮೇಲೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡವೆ? ಸಾಕ್ಷಿ ತೆಗೆದುಕೊಂಡಿದ್ದೇವೆಂದು ಹೇಳಿರುವ ವ್ಯಕ್ತಿ ಸತ್ತು 2 ವರ್ಷ ವಾಗಿದೆ. ಅಂಥ ಸುಳ್ಳು ರಿಪೋರ್ಟ್‌ನ್ನು ಕೋರ್ಟಿಗೆ ಕಳುಹಿಸಿದ್ದಾರೆ. ಇಂಥ ಅಧಿಕಾರಿಗಳನ್ನು ಏತಕ್ಕೆ ಇಟ್ಟಿದ್ದೀರಿ.

ಶ್ರೀ ಬಿ. ರಾಚಯ್ಯ.—ಈ ವಿಷಯದಲ್ಲಿ ಫೋನ್ ಮಾಡಿ ಎಂದು ಹೇಳಿದ್ದಾರೆ. ಫೋನ್ ಮಾಡಿ ವಿಷಯ ತಿಳಿದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—

ಅಧ್ಯಕ್ಷರು.—ನೀವು ಬೇರೆ ಪ್ರಶ್ನೆ ಹಾಕಿ ಅವಕಾಶ ಕೊಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಹಾಕುತ್ತೇನೆ, ಗೊತ್ತಿದೆ, ತಾವು ಹಾಗೆ ಮಾಡಿದರೆ ಹೇಗಾಗುತ್ತದೆ

ಅಧ್ಯಕ್ಷರು.—ಒಂದು ಗಂಟೆಯಲ್ಲಿ ಎಲ್ಲಾ ಪ್ರಶ್ನೆಗಳು ಮುಗಿಯಬೇಕು ಲ್ಯಾಪ್ಸ್ ಮಾಡುವುದು ಸರಿಯಲ್ಲ. ಪ್ರಶ್ನೆಹಾಕಿದವರಿಗೆ 2-3 ಸಾರಿ ಅವಕಾಶ ಕೊಡುತ್ತೇನೆ. ಬೇರೆಯವರಿಗೆ ಕೊಡುವುದು ಸಾಧ್ಯವಿಲ್ಲ. ನಾನು ಏನು ಇಲ್ಲಿ ಕುಳಿತು ಮಾಡಿದರೂ ಆದು ಸದಸ್ಯರ ಸಲುವಾಗಿಯೇ ಹೊರತು ಬೇರೆ ಆಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಮಾನ್ಯತೆ ಬಗ್ಗೆ

ಳಿಃ(೨೭೨) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ, ಸಣ್ಣ ನೀರಾವರಿ ಮತ್ತು ಬಂದರು ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆ ಪ್ರಶ್ನೆಯನ್ನು ರಹಸ್ಯ ಮತ ದಾನದ ಮೂಲಕ ಇತ್ಯರ್ಥ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಸಾರಿಗೆ ಮಂತ್ರಿಗಳು ವಿಧಾನ ಸಭೆಯಲ್ಲೂ ಮತ್ತು ಹೊರಗಡೆಯೂ ಆಶ್ವಾಸನೆ ಇತ್ತಿರುವುದು ನಿಜವಲ್ಲವೇ ?

ಆ) ಈ ಆಶ್ವಾಸನೆ ಇನ್ನೂ ಜಾರಿಗೆ ಬಂದಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಸರ್ಕಾರ ಇತ್ತಿರುವ ಆಶ್ವಾಸನೆಯನ್ನು ಜಾರಿ ಮಾಡಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ವೀರಣ್ಣ (ಸಾರಿಗೆ ಸಣ್ಣ ನೀರಾವರಿ ಮತ್ತು ಬಂದರು ಖಾತೆ ಮಂತ್ರಿಗಳು).—

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆ ಪ್ರಶ್ನೆಯನ್ನು ರಹಸ್ಯ ಮತ ದಾನದ ಮೂಲಕ ಇತ್ಯರ್ಥ ಮಾಡುವ ಬಗ್ಗೆ ಮಾನ್ಯ ಸಾರಿಗೆ ಸಚಿವರು ಪರಿಶೀಲಿಸುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿರುತ್ತಾರೆ.

ಆ) ಬಂದಿದೆ.

ಇ) ಕಾರ್ಮಿಕ ಸಂಘಗಳನ್ನು ಶಾಸನ ಬದ್ಧವಾಗಿ ಗುರುತಿಸಿ ಮಾನ್ಯತೆ ನೀಡುವ ಕ್ರಮ ಕೇಂದ್ರದಲ್ಲಿ ಯಾಗಲೀ ಅಥವಾ ರಾಜ್ಯಮಟ್ಟದಲ್ಲಿ ಯಾಗಲೀ ಜಾರಿಯಲ್ಲಿಲ್ಲ. ಔದ್ಯೋಗಿಕ ವಿವಾದಗಳ ನಿಯಮಗಳು ತ್ರಿಪಕ್ಷೀಯ ಒಡಂಬಡಿಕೆಗಳು. ಕಾರ್ಮಿಕ ಸಂಘಗಳನ್ನು ಗುರುತಿಸುವ ಬಗೆಗೆ ಕೆಲವಾರು ಮಾರ್ಗದರ್ಶನಗಳನ್ನು ನೀಡುತ್ತವೆಯಾದರೂ ಖಚಿತವಾದ ಅಧಿಕಾರವನ್ನು ಯಾವುದೇ ಪ್ರಾಧಿಕಾರಕ್ಕೂ ನೀಡುತ್ತಿಲ್ಲ. ಹೀಗಾಗಿ ಕಾರ್ಮಿಕ ಸಂಘಗಳನ್ನು ಗುರುತಿಸಿ ಮಾನ್ಯತೆ ನೀಡುವ ವಿಷಯವನ್ನು ಸಮಗ್ರವಾಗಿ ಆಲೋಚಿಸಬೇಕಾಗುತ್ತದೆ. ಚುನಾವಣಾಧಿಕಾರಿಗಳ ನೇರ ತೀರ್ಮಾನದ (ರೆಫರಂಡಂ) ಮೂಲಕ ಅಥವಾ ಗುಪ್ತ ಮತದಾನ ಪದ್ಧತಿಯ ಮುಖಾಂತರ ಆತ್ಯಧಿಕ ಕಾರ್ಮಿಕರ ಬೆಂಬಲ ಪಡೆಯುವ ಒಂದು ಸಂಘಕ್ಕೆ ಕೇಂದ್ರಮಟ್ಟದಲ್ಲಿ ಮಾನ್ಯತೆ ನೀಡುವುದು ಪ್ರತಿಯೊಂದು ವಿಭಾಗದಲ್ಲಿಯೂ ಅಧಿಕ ಕಾರ್ಮಿಕ

ಬೆಂಬಲವನ್ನು ಪಡೆಯುವ ಕಾರ್ಮಿಕ ಸಂಘವನ್ನು ಗುರುತಿಸಿ ಮಾನ್ಯತೆ ನೀಡುವುದು ಅತ್ಯಂತ ಹೆಚ್ಚು ಮಾನ್ಯತೆ ಪಡೆದ ಕಾರ್ಮಿಕ ಸಂಘವು ಮಹಾಮಂಡಲದೊಡನೆ ಕಾರ್ಮಿಕ ಸಮಸ್ಯೆಗಳ ಬಗೆಗೆ ಸಮಾಲೋಚಿಸುವುದು ವಿಭಾಗ ಮಟ್ಟದಲ್ಲಿ ಆಯಾ ಚುನಾಯಿತ ಕಾರ್ಮಿಕ ಸಂಘವು ಕಾರ್ಮಿಕ ಸಮಸ್ಯೆಗಳನ್ನು ವಿಭಾಗಮಟ್ಟದ ಆಡಳಿತ ವರ್ಗದೊಡನೆ ಸಮಾಲೋಚನೆ ನಡೆಸುವುದು ಹೀಗೆ ಪ್ರಸ್ತಾಪಗಳನ್ನು ನಿಗಮವ ದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಕಾರ್ಮಿಕ ಸಂಘಗಳಿಗೂ ಮತ್ತು ಮಹಾಮಂಡಳಿಗಳಿಗೂ ೧೯೮೬ರ ಜುಲೈ ತಿಂಗಳಿನಲ್ಲಿ ಕಳುಹಿಸಿಕೊಡಲಾಯಿತು. ಈ ಬಗೆಗೆ ಅಭಿಪ್ರಾಯವನ್ನು ತಿಳಿಸುವಂತೆ ಕೋರಲಾಗಿತ್ತು. ಈ ಸಂಬಂಧದಲ್ಲಿ ವಿವಿಧ ಸಂಘ ಮಹಾಮಂಡಲಗಳು ವಿಭಿನ್ನ ರೀತಿಯ ಅಭಿಪ್ರಾಯಗಳನ್ನು ಸಲ್ಲಿಸಿವೆ ಈಗ ನಿಗಮವು ಈ ಎಲ್ಲಾ ಸಲಹೆ ಸೂಚನೆಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಬೇಕಾಗಿದೆ. ಆದ್ದರಿಂದ ಕಾನೂನು ತಜ್ಞರ ಅಭಿಪ್ರಾಯಕ್ಕಾಗಿ ಕಾಯಲಾಗುತ್ತಿದೆ. ಕಾನೂನು ತಜ್ಞರ ಅಭಿಪ್ರಾಯ ಬಂದ ನಂತರ ಶೀಘ್ರವಾಗಿ ಮಾನ್ಯತೆ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗವುದು.

ಶ್ರೀ ಎಂ.ಎಸ್. ಕೃಷ್ಣನ್.—ಇದು ಬಹಳ ತರಾತುರಿಯಾಗಿದೆ. ಹಿಂದಿನ ರಾಜ್ಯ ರಸ್ತೆ ಸಾರಿಗೆ ಸಚಿವರು ಈ ವಿಷಯವನ್ನು ಪರಿಶೀಲಿಸುವುದಾಗಿ ವಿಧಾನಸಭೆಯಲ್ಲಿ ಹೇಳಿದ್ದರು ಎಂದು ಹೇಳಿದ್ದೀರಿ. ನನ್ನ ಹತ್ತಿರ ರೆಕಾರ್ಡ್ ಇದೆ. ಮಾನ್ಯ ಸಿದ್ಧಾರವರು ಸಾರಿಗೆ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದರು ಆದಷ್ಟು ಜಾಗ್ರತೆ ರಹಸ್ಯ ಮತದಾನ ಪದ್ಧತಿಯನ್ನು ಜಾರಿಗೆ ತರುತ್ತೇವೆ ಎಂದು ಅವರು ಪರಿಶೀಲಿಸುವುದಾಗಿ ಹೇಳಿರಲಿಲ್ಲ. ಅದನ್ನು ತಾವು ನೋಡುತ್ತೀರಾ ?

ಶ್ರೀ ವೀರಣ್ಣ.—ಅಧ್ಯಕ್ಷರೇ, ಈ ಮಾನ್ಯತೆ ಕೊಡತಕ್ಕದರ ಬಗ್ಗೆ ರೆಫರಂಡಂ ಮೂಲಕ ಅಥವಾ ಸೀಕ್ರೆಟ್‌ಬ್ಯಾಲೆಟ್ ಮೂಲಕ ಸಮಸ್ಯೆ ಬಗೆಹರಿಸಬೇಕು ಎಂಬುದರಲ್ಲಿ ವಿವಾದವಿಲ್ಲ. ಮಾಡಲೇ ಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಆದರೆ ಆದಕ್ಕೆ ಟೈಮ್ ಪ್ರಶ್ನೆ ಆಷ್ಟೆ. ಕೃಷ್ಣನ್ ಅವರ ಮುಂದಿನ ಪ್ರಶ್ನೆ ಏನು ಎಂದು ನನಗರ್ಥವಾಗುತ್ತದೆ ತೀರ್ಮಾನ ತೆಗೆದುಕೊಂಡಿದ್ದರೆ ಒಂದೇ ತಿಂಗಳಲ್ಲಿ ಮಾಡುತ್ತೀರಾ ಎರಡು ತಿಂಗಳಲ್ಲಿ ಮಾಡುತ್ತೀರಾ ಮೂರು ತಿಂಗಳಲ್ಲಿ ಮಾಡುತ್ತೀರಾ ಎಂದು ಕೇಳು ತ್ತಾರೆ ಮಾರ್ಚ್ ಏಪ್ರಿಲ್‌ನಲ್ಲಿ ಆದನ್ನು ಮಾಡಿ ಮುಗಿಸುತ್ತೇವೆ ಆದರ ಬಗ್ಗೆ ಯಾವುದೇ ಅನುಮಾನ ಬೇಡ ಕಾನೂನು ತಜ್ಞರ ಸಲಹೆಯನ್ನು ಆದಷ್ಟು ಜಾಗ್ರತೆ ತರಿಸಿ ಮಾರ್ಚ್ ತಿಂಗಳಲ್ಲಿ ಅಥವಾ ಏಪ್ರಿಲ್‌ನಲ್ಲಿ ಆದರೂ ಆ ಕೆಲಸ ಮಾಡಿ ಮುಗಿಸುತ್ತೇವೆಂದು ಮಾನ್ಯ ಕೃಷ್ಣನ್ ಅವರಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದೇ ಒಂದು.....

ಅಧ್ಯಕ್ಷರು.—ಸಾಕು, ಉತ್ತರ ಹೇಳಿದ್ದಾರಲ್ಲ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ.....

ಅಧ್ಯಕ್ಷರು.—ವೆಂಕಟರಾಮಯ್ಯನವರೆ, ತಮಗೆ ಅವಕಾಶ ಕೊಡುವುದಿಲ್ಲ ಕೂಡ್ರಿ ಕೂಡ್ರಿ ಅಂದರೆ ಕೂಡಬೇಕು. ಆರ್.ಎನ್. ನಾಯಕ್ ಅವರಿಗೆ ಅವಕಾಶ ಕೊಟ್ಟಿಲ್ಲ. ನಿಮಗೆ ಕೊಟ್ಟರೆ ಪಕ್ಷಪಾತ ಮಾಡಿದಂತಾಗುತ್ತದೆ.

ಗುಲ್ಬರ್ಗಾದಲ್ಲಿ ಐ. ಪಿ. ಪಿ. ಯೋಜನೆ

೪೬ (೨೩೪ ಬಿ) ಶ್ರೀ ಕೆ. ಬಿ. ಶಾಣಪ್ಪ (ಶಾಹಾಬಾದ್).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಭಾರತ ಜನಸಂಖ್ಯಾ ಯೋಜನೆಯಡಿಯಲ್ಲಿ (ಐಪಿಪಿ) ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳ ಹಳ್ಳಿಗಳಲ್ಲಿ ಆಸ್ಪತ್ರೆ ಕಟ್ಟಡ ಮತ್ತು ವೈದ್ಯರುಗಳಿಗೆ ಹಾಗೂ ದಾದಿಯರುಗಳಿಗೆ ವಸತಿ ಗೃಹಗಳನ್ನು ಕಟ್ಟಲಾಗುತ್ತಿದೆಯೇ, ಹಾಗೂ ಇದಕ್ಕೆ ವಿರ್ಚಾಗುವ ಹಣವೆಷ್ಟು?

ಆ) ಸದರಿ ಯೋಜನೆಯು ಯಾವಾಗ ಮುಕ್ತಾಯವಾಗುವುದು?

ಇ) ಶಾಹಾಬಾದ ಕ್ಷೇತ್ರದಲ್ಲಿ ಸದರಿ ಯೋಜನೆಯಡಿಯಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಕೆಲಸವು ಪ್ರಾರಂಭವಾಗಿದೆ?

ಈ) ವಾಡಿಯಲ್ಲಿನ ಮತ್ತು ಕಿಣಗಿಯಲ್ಲಿನ ಮೇಲ್ಕಂಡ ಕಟ್ಟಡಗಳ ಬಗ್ಗೆ ವಿವರಗಳನ್ನು ಒದಗಿಸುವುದು?